# SEPTEMBER 15, 2024

# AKASHAVANI - DHARWAD

# PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಇಂದು, ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನ; ಬೀದರ್ ದಿಂದ ಚಾಮರಾಜನಗರದ ವರೆಗೆ, ಮಾನವ ಸರಪಳಿ.
- 'ಸ್ವಚ್ಛ ಭಾರತ ಅಭಿಯಾನ'ದ ದಶಮಾನೋತ್ಸವ; ಇದೇ 17 ರಿಂದ ಸ್ವಚ್ಛತಾ ಜನಾಂದೋಲನ.
- ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ, 21ನೇ ತಾರೀಖಿನಿಂದ, ರೈತ ಜಾತ್ರೆ 'ಕೃಷಿ ಮೇಳ' – ಉಪ ಕುಲಪತಿ ಪಿ.ಎಂ. ಪಾಟೀಲ.
- ಸಂಪೂರ್ಣತಾ ಅಭಿಯಾನ; ಉತ್ತರಕನ್ನಡ ಜಿಲ್ಲೆಯ, ಆಶೋತ್ತರ ತಾಲೂಕು ಮುಂಡಗೋಡದಲ್ಲಿ, ಜನ ಜಾಗ್ರತಿ.

<><><>

ಈಗ ವಾರ್ತೆಗಳ ವಿವರ

<><><>

'ನಾಗರಿಕ ಸಹಭಾಗಿತ್ವ ಮತ್ತು ಆಡಳಿತದಲ್ಲಿ, ಕೃತಕ ಬುದ್ಧಿಮತ್ತೆಯ ಮಾರ್ಗ' ಎಂಬ ಧ್ಯೇಯದಡಿ, ಇಂದು, ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ಆಚರಿಸಲಾಗುತ್ತಿದೆ. ಬೀದರ್ ನಿಂದ ಚಾಮರಾಜನಗರದ ವರೆಗೆ, ಇಂದು ಬೆಳಗ್ಗೆ 9.30 ರಿಂದ 10.30ರ ವರೆಗೆ, ಎರಡೂವರೆ ಸಾವಿರ ಕಿಲೋ ಮೀಟರ್ ಉದ್ದದ ಮಾನವ ಸರಪಳಿ ನಿರ್ಮಿಸಿ, ಸಂವಿಧಾನ ಪೀಠಿಕೆ ಓದುವ, ರಾಷ್ಟ್ರಗೀತೆ ಮೊಳಗಿಸುವ ಯೋಜನೆಯನ್ನು, ರಾಜ್ಯ ಸರ್ಕಾರವು ಸಮಾಜ ಕಲ್ಯಾಣ ಇಲಾಖೆ ಮೂಲಕ ರೂಪಿಸಿದೆ.

<><><>

ಅಕ್ಷರ ಸಂತ, ಪದ್ಮಶ್ರೀ ಪುರಸ್ಕೃತ, ಮಂಗಳೂರಿನ ಹರೇಕಳ ಹಾಜಬ್ಬ ಅವರು ಅಭಿಯಾನದ ರಾಯಬಾರಿಯಾಗಿದ್ದಾರೆ.

<><><>

ಚಿತ್ರದುರ್ಗ ಜಿಲ್ಲೆಯಲ್ಲಿ, ರಾಜ್ಯದಲ್ಲಿಯೇ ಅತೀ ಉದ್ದದ, 145 ಕಿಲೋ ಮೀಟರ್ ಮಾನವ ಸರಪಳಿಯನ್ನು, ಒಂದೂವರೆ ಲಕ್ಷ ಜನ ಪಾಲ್ಗೊಂಡು, ನಿರ್ಮಿಸಲಿದ್ದಾರೆ.

<><><>

ಉತ್ತರಕನ್ನಡ ಜಿಲ್ಲೆ, ಹಳಿಯಾಳ ತಾಲೂಕಿನ ಮಾವಿನಕೊಪ್ಪದಿಂದ, ಭಟ್ಕಳ ತಾಲೂಕಿನ ಶಿರೂರು ವರೆಗೆ, 143 ಕಿಲೋ ಮೀಟರ್, ಎರಡನೇ ಅತೀ ಉದ್ದದ ಮಾನವ ಸರಪಳಿ ರಚಿಸಲಾಗುತ್ತಿದೆ ಎಂದು, ಜಿಲ್ಲಾಧಿಕಾರಿ ಲಕ್ಷ್ಮೀ ಪ್ರಿಯಾ ಹೇಳಿದ್ದಾರೆ.

<><><>

ಧಾರವಾಡ ಜಿಲ್ಲೆಯಲ್ಲಿ, ತೇಗೂರ ಗ್ರಾಮದಿಂದ, ಉತ್ತರಕನ್ನಡ ಜಿಲ್ಲೆಯ ಗಡಿ, ಮಾವಿನಕೊಪ್ಪ ಗ್ರಾಮದ ವರೆಗೆ, 4 ಸಾವಿರ ಸಸಿ ನೆಡುವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ.

<><><>

ಬಳ್ಳಾರಿ ಜಿಲ್ಲೆಯಲ್ಲಿ, ಇಂದು 10 ಸಾವಿರ ಗಿಡ ಹಾಗೂ ವಿಜಯಪುರದಲ್ಲಿ 30 ಸಾವಿರ ಗಿಡಗಳನ್ನು ನೆಡುವ ಸಂಕಲ್ಪ ಮಾಡಲಾಗಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಹೊಸ ದಿಲ್ಲಿಯ ಕೆಂಪುಕೋಟೆಯಿಂದ, ದೇಶದ ಜನತೆಗೆ ಕರೆ ಕೊಟ್ಟ, 'ಸ್ವಚ್ಛ ಭಾರತ ಅಭಿಯಾನ'ದ 10ನೇ ವಾರ್ಷಿಕೋತ್ಸವದ ಸಂದರ್ಭವಿದು. ಈ ಯೋಜನೆಯಡಿ ಸಾಧನೆಗಳ ಮೈಲುಗಲ್ಲುಗಳನ್ನು ಗೌರವಿಸಲು, ದೇಶಾದ್ಯಂತ 17 ನೇ ತಾರೀಖಿನಿಂದ ಅಕ್ಟೋಬರ್ 2 ಗಾಂಧಿ ಜಯಂತಿ ವರೆಗೆ, 'ಸ್ವಚ್ಛತಾ ಹೀ ಸೇವಾ' ಪಾಕ್ಷಿಕ ಆಯೋಜಿತವಾಗಿದೆ.

<><><>

ರಾಜ್ಯದ 31 ಜಿಲ್ಲಾಡಳಿತಗಳು, ತಾಲೂಕು ಆಡಳಿತಗಳ ಸಹಯೋಗದಲ್ಲಿ, ಸ್ವಚ್ಛತಾ ದಿನದ ವರೆಗೆ, ಸಾಮುದಾಯಿಕ ಸಹಭಾಗಿತ್ವದಲ್ಲಿ, ಸ್ವಚ್ಛತಾ ಆಂದೋಲನ ಜರುಗಲಿದೆ.

<><><>

ಸ್ವಚ್ಛ ಭಾರತ್ ಮಿ ನ್ ಯೋಜನೆಯ ಅನುಷ್ಠಾನದಲ್ಲಿ, ಕರ್ನಾಟಕ ರಾಜ್ಯ ರಾಷ್ಟ್ರಕ್ಕೆ ಮಾದರಿಯಾಗಿದೆ ಎಂದು, ರಾಜ್ಯದ ಪೌರಾಡಳಿತ ಖಾತೆ ಸಚಿವ ರಹೀಂಖಾನ್ ಹೇಳಿದ್ದಾರೆ. ಹೊಸ ದಿಲ್ಲಿಯ ಸು ್ಮ ಸ್ವರಾಜ್ ಭವನದಲ್ಲಿ ನಡೆದ, 'ಸ್ವಚ್ಛತೆಯೇ ಸೇವೆ' ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ, ಅವರು ಮಾತನಾಡಿದರು.

<><><>

ಧಾರವಾಡ ಆಕಾಶವಾಣಿಯ ಕಾರ್ಯಕ್ರಮ ವಿಭಾಗದ ಮುಖ್ಯಸ್ಥ ಶರಣಬಸವ ಚೋಳಿನ್ ಹಾಗೂ ತಾಂತ್ರಿಕ ವಿಭಾಗದ ಸಹಾಯಕ ನಿರ್ದೇಶಕ ವೆಂಕಟೇಶ ದೇಶಪಾಂಡೆ ಸೇರಿದಂತೆ, ಸಿಬ್ಬಂದಿ ಪಾಲ್ಗೊಂಡು, ಸ್ವಚ್ಛತೆಯೇ ಸೇವೆ ಪಾಕ್ಷಿಕಕ್ಕೆ ಚಾಲನೆ ನೀಡಿದರು.

<><><>

ಪೌರ ಕಾರ್ಮಿಕರ ಪಿತಾಮಹ ಸಾಲಪ್ಪ ಅವರ, 28ನೇ ಪುಣ್ಯ ಸ್ಮರಣೆ ಹಿನ್ನೆಲೆ, ಬೆಂಗಳೂರು ಮಹಾನಗರ ಪಾಲಿಕೆಯ ಆವರಣದಲ್ಲಿ, ಐ.ಪಿ.ಡಿ. ಸಾಲಪ್ಪ ಅವರ ಪ್ರತಿಮೆಗೆ, ಮುಖ್ಯ ಆಯುಕ್ತ ತು ಾರ್ ಗಿರಿನಾಥ್ ಪು ್ಪ ನಮನ ಸಲ್ಲಿಸಿದರು. ಸ್ವಚ್ಛತಾ ಪಾಕ್ಷಿಕಕ್ಕೆ ಚಾಲನೆ ನೀಡಿದರು.

<><><>

ನೈರ್ಮಲ್ಯದ ಬಗ್ಗೆ, ಉತ್ತರಕನ್ನಡ ಜಿಲ್ಲೆಯಾದ್ಯಂತ, ಇದೇ 17 ರಿಂದ ಜನಾಂದೋಲನವಾಗಿ, 'ಸ್ವಚ್ಛತಾ ಹೀ ಸೇವಾ ಪಾಕ್ಷಿಕ' ಆಯೋಜಿಸುವಂತೆ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಜಿಲ್ಲಾಡಳಿತಕ್ಕೆ ಸೂಚಿಸಿದ್ದಾರೆ.

<><><>

ಮೈಸೂರು ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಕೆ.ಎಂ. ಗಾಯಿತ್ರಿ, ಜಿಲ್ಲೆಯಾದ್ಯಂತ ಅಕ್ಟೋಬರ್ 2ರ ವರೆಗೆ, ಸ್ವಚ್ಛತಾ ಪಾಕ್ಷಿಕ ಆಯೋಜಿಸುವುದಾಗಿ ತಿಳಿಸಿದ್ದಾರೆ.

<><><>

ಧಾರವಾಡ ಕೃಷಿ ವಿಶ್ವವಿದ್ಯಾಲಯ, ರೈತರ ಸೇವೆಯಲ್ಲಿ ಸಾರ್ಥಕ 38 ವರ್ಷಗಳನ್ನು ಪೂರ್ಣಗೊಳಿಸಿದ ಹಿರಿಮೆಗೆ ಪಾತ್ರವಾಗಿದೆ. ಈ ತಿಂಗಳ 21 ರಿಂದ 24ನೇ ತಾರೀಖಿನ ವರೆಗೆ ನಾಲ್ಕು ದಿನಗಳ ಕೃಷಿ ಮೇಳವನ್ನು, ಆಯೋಜಿಸಿದೆ. ಕೃಷಿ ಮೇಳದಲ್ಲಿ ಕಿತ್ತೂರು ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಿಂದ 16 ಲಕ್ಷಕ್ಕೂ ಹೆಚ್ಚು ರೈತರು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಪ್ರದೇಶ ಸಮಾಚಾರಕ್ಕಾಗಿ ಈ ಕುರಿತು ಹೆಚ್ಚಿನ ಮಾಹಿತಿ ನೀಡಿದ್ದಾರೆ, ಧಾರವಾಡ ಕೃಷಿ ವಿಶ್ವವಿದ್ಯಾಲಯದ ಉಪ ಕುಲಪತಿ ಪಿ.ಎಂ. ಪಾಟೀಲ.

<><><>

ಧಾರವಾಡ ಕೃವಿವಿ ಉಪ ಕುಲಪತಿ ಪಿ.ಎಂ. ಪಾಟೀಲ ಧ್ವನಿ 50 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಭಾರತ ರತ್ನ ಮೋಕ್ಷಗುಂಡಂ ವಿಶ್ವೇಶ್ವರಾಯ ಅವರ, 163ನೇ ಜನ್ಮ ದಿನದ ಅಂಗವಾಗಿ, ಇಂದು 57ನೇ ರಾಷ್ಟ್ರೀಯ ಅಭಿಯಂತರರ ದಿನ ಆಚರಿಸಲಾಗುತ್ತಿದೆ.ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ, ಇಂದು ಸಂಜೆ 6 ಗಂಟೆಗೆ, ರಾ.ಹ.ದೇಶಪಾಂಡೆ ಸಭಾ ಭವನದಲ್ಲಿ, ದೇಶ ಕಂಡ ಅಪರೂಪದ ಎಂಜಿನೀಯರ್ ಸರ್ ಎಂ.ವಿಶ್ವೇಶ್ವರಾಯ ಹಾಗೂ ರಾಜ್ಯ ಕಂಡ ಸರ್ವಶ್ರೇಷ್ಠ ನೀರಾವರಿ ತಜ್ಞ, ಎಸ್.ಜಿ.ಬಾಳೇಕುಂದ್ರಿ ಅವರ ಸ್ಮರಣಾರ್ಥ, ದತ್ತಿ ಉಪನ್ಯಾಸ ಆಯೋಜಿತವಾಗಿದೆ. ಲೋಕೋಪಯೋಗಿ ಇಲಾಖೆಯ ವಿಶ್ರಾಂತ ಮುಖ್ಯ ಅಭಿಯಂತರ, ಕೃಷ್ಣಾಜಿ ಚೌವ್ಹಾಣ್, ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಧಾರವಾಡ ವಾಲ್ಮಿಯ ಅಧಿಕ್ಷಕ ಅಭಿಯಂತರ, ಬಸವರಾಜ ಬಂಡಿವಡ್ಡರ, ಅಧ್ಯಕ್ಷತೆ ವಹಿಸಲಿದ್ದಾರೆ.

<><><>

ಕೇಂದ್ರದ ನೀತಿ ಆಯೋಗ ಸಂಚಾಲಿತ, ಸಂಪೂರ್ಣತಾ ಅಭಿಯಾನದಡಿ, ಉತ್ತರಕನ್ನಡ ಜಿಲ್ಲೆಯ, ಆಶೋತ್ತರ ತಾಲೂಕು ಮುಂಡಗೋಡದಲ್ಲಿ, ವಿವಿಧ ಇಲಾಖೆಗಳ ಸಹಯೋಗದಲ್ಲಿ, ಒಟ್ಟು ಆರು ಮಾನದಂಡಗಳಡಿ ಪ್ರಗತಿ ಸಾಧಿಸುತ್ತಿದೆ. ಮುಂಡಗೋಡ ತಾಲೂಕು ಪಂಚಾಯತ ಕಾರ್ಯನಿರ್ವಹಣಾಧಿಕಾರಿ ಟಿ.ವೈ. ದಾಸನಕೊಪ್ಪ, ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಮುಂಡಗೋಡ ತಾ.ಪಂ. ಇ.ಓ. ಟಿ.ವೈ. ದಾಸನಕೊಪ್ಪ ಧ್ವನಿ 54 ಸೆಕೆಂದುಗಳು

<><><>

ಕಾದಂಬರಿಕಾರ ಎಸ್.ಎಲ್.ಭೈರಪ್ಪ ಅವರಿಗೆ, ಬೀದರ್ ಜಿಲ್ಲೆ ಬಸವಕಲ್ಯಾಣದ ಹಾರಕೂಡ ಹಿರೇಮಠ ಸಂಸ್ಥಾನದ, 'ಶ್ರೀ ಚನ್ನರೇಣುಕ ಬಸವ ಪ್ರಶಸ್ತಿ' ಪ್ರಕಟಿಸಲಾಗಿದೆ. ಮಠಾಧೀಶ ಶ್ರೀ ಚನ್ನವೀರ ಶಿವಾಚಾರ್ಯರು ಬಸವಕಲ್ಯಾಣದಲ್ಲಿ ಸುದ್ದಿಗೋಷ್ಠಿ

ನಡೆಸಿ, ಪ್ರಶಸ್ತಿಯು 1 ಲಕ್ಷ ರೂಪಾಯಿ ನಗದು, 20 ಗ್ರಾಂ ಚಿನ್ನದ ಪದಕ ಹಾಗೂ ಫಲಕ ಒಳಗೊಂಡಿದೆ, ಎಂದರು. ಅಕ್ಟೋಬರ್ 11ರಂದು ಶ್ರೀ ಮಠದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದೆ.

<><><>

ಕರ್ನಾಟಕ ಯಕ್ಷಗಾನ ಅಕಾದೆಮಿಯ, 2023ನೇ ಸಾಲಿನ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದ್ದು, 'ಪಾರ್ತಿ ಸುಬ್ಬ ಪ್ರಶಸ್ತಿ'ಗೆ ಯಕ್ಷಗಾನದ ಗುರು, ಉಡುಪಿಯ ಬನ್ನಂಜೆ ಸಂಜೀವ ಸುವರ್ಣ ಭಾಜನರಾಗಿದ್ದಾರೆ. ಪ್ರಶಸ್ತಿ 1 ಲಕ್ಷ ರೂಪಾಯಿ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಅಕಾದೆಮಿ ಅಧ್ಯಕ್ಷ ತಲ್ಲೂರು ಶಿವರಾಮ ಶೆಟ್ಟಿ, ಉಡುಪಿಯಲ್ಲಿ ಸುದ್ದಿಗೋಷ್ಠಿ ನಡೆಸಿ, ಅಕಾದೆಮಿಯ ಗೌರವ ಪ್ರಶಸ್ತಿ ಹಾಗೂ ಯಕ್ಷಸಿರಿ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದರು.

<><><>

ಅಕ್ಟೋಬರ್ 17 ರಂದು, ಬೆಳಗ್ಗೆ 7.40ಕ್ಕೆ, ಕೊಡಗಿನ ತಲಕಾವೇರಿಯಲ್ಲಿ ತೀರ್ಥ ಉದ್ಭವವಾಗಲಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಬೋಸರಾಜು ತಿಳಿಸಿದ್ದಾರೆ. ಭಾಗಮಂಡಲ ಶ್ರೀ ಭಗಂಡೇಶ್ವರ ದೇವಾಲಯದ ಹಳೆ ಮುಡಿಶೆಡ್ ಕಟ್ಟಡದ ಸಭಾಂಗಣದಲ್ಲಿ, ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

<><><>

ಬೆಳಗಾವಿಯ ಬಿ.ಎಚ್.ತುಷಾರ್ ವಂಸತ್, ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಆರಂಭವಾದ, ಕರ್ನಾಟಕ ರಾಜ್ಯ ಅಂತರ್ ಜಿಲ್ಲಾ ಜ್ಯೂನಿಯರ್ ಮತ್ತು 23 ವರ್ಷದ ಒಳಗಿನವರ ಅಥ್ಲೆಟಿಕ್ಸ್‌ನಲ್ಲಿ, ಪುರುಷರ 800 ಮೀಟರ್ಸ್ ಓಟದಲ್ಲಿ ಹೊಸ ದಾಖಲೆ ಬರೆದರು. 23 ವರ್ಷದ ಒಳಗಿನವರ ಮಹಿಳೆಯರ 800 ಮೀಟರ್ಸ್ ಓಟದಲ್ಲಿ ದಕ್ಷಿಣಕನ್ನಡ ಜಿಲ್ಲೆಯ ದೀಪಶ್ರೀ ಪ್ರಥಮ ಸ್ಥಾನ ಗಳಿಸಿದರು. ಮೈಸೂರು ಜಿಲ್ಲಾ ಅಥ್ಲೆಟಿಕ್ಸ್ ಸಂಸ್ಥೆ ಆಶ್ರಯದಲ್ಲಿ ಆಯೋಜಿತ ಪಂದ್ಯಾವಳಿಯಲ್ಲಿ, ಒಟ್ಟು 5 ವಿಭಾಗಗಳಲ್ಲಿ 136 ಸ್ಪರ್ಧೆಗಳು ನಡೆಯುತ್ತಿವೆ. ಸಾವಿರದ 600 ಸ್ಪರ್ಧಿಗಳು ಪಾಲ್ಗೊಂಡಿದ್ದಾರೆ. ನಾಡಿದ್ದು 17ರ ವರೆಗೆ ಸ್ಪರ್ಧೆಗಳು ನಡೆಯಲಿವೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಇಂದು, ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನ; ಬೀದರ್ ದಿಂದ ಚಾಮರಾಜನಗರದ ವರೆಗೆ, ಮಾನವ ಸರಪಳಿ.
- 'ಸ್ವಚ್ಛ ಭಾರತ ಅಭಿಯಾನ'ದ ದಶಮಾನೋತ್ಸವ; ಇದೇ 17 ರಿಂದ ಸ್ವಚ್ಛತಾ ಜನಾಂದೋಲನ.
- ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ, 21ನೇ ತಾರೀಖಿನಿಂದ, ರೈತ ಜಾತ್ರೆ 'ಕೃಷಿ ಮೇಳ' – ಪ್ರೊಫೆಸರ್ ಪಿ.ಎಂ. ಪಾಟೀಲ.
- ಸಂಪೂರ್ಣತಾ ಅಭಿಯಾನ; ಉತ್ತರಕನ್ನಡ ಜಿಲ್ಲೆಯ, ಆಶೋತ್ತರ ತಾಲೂಕು ಮುಂಡಗೋಡದಲ್ಲಿ, ಜನ ಜಾಗ್ರತಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>